ಫ್ಯಾಕ್ಸ್ : 0816-2255761
ದೂರವಾಣಿ : 2272280

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103

ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/91/2015-16 ದಿನಾಂಕ : 28-10-16

ಮಾರ್ಪಾಡಿತ ವಿನ್ಯಾಸ ಮಂಜೂರಾತಿ ಆದೇಶ

ವಿಷಯ : ತುಮಕೂರು ತಾಲ್ಲೂಕು, ಕಸಬಾ ಹೋಬಳಿ, **ತುಮಕೂರು ಅಮಾನಿಕೆರೆ** ಗ್ರಾಮದ ಸರ್ವೆ ನಂಬರ್ **295/4** ರಲ್ಲಿ **0-20** ಗುಂಟೆ ಮತ್ತು ಸ.ನಂ.**295/18** ರಲ್ಲಿ **0-18** ಗುಂಟೆ ಒಟ್ಟು **0-38 ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಮಾರ್ಪಾಡಿತ ವಿನ್ಯಾಸ ನಕ್ಷೆ ಅನುಮೋದನೆ ನೀಡುವ ಬಗ್ಗೆ.

ಉಲ್ಲೇಖ : 1. ಅರ್ಜಿದಾರರ ಮನವಿ ದಿನಾಂಕ **23-07-2016**
2. ಈ ಕಛೇರಿಯ ವಿನ್ಯಾಸ ಅನುಮೋದನೆ ಆದೇಶ ಸಂಖ್ಯೆ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/**91**/2015-16 ದಿನಾಂಕ **10-12-2015**
3. ದಿನಾಂಕ **23-08-2016** ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **23** ರ ನಿರ್ಣಯ.
4. ಪ್ರಾಧಿಕಾರಕ್ಕೆ ಉತ್ತಮತೆ ಶುಲ್ಕ, ಕೆರೆ ಅಭಿವೃದ್ಧಿ ಶುಲ್ಕ, ಮತ್ತು ಇತರೆ ಶುಲ್ಕಗಳನ್ನು ರಸೀದಿ ಸಂಖ್ಯೆ **37751 ರೂ.1,18,030** (ಒಂದು ಲಕ್ಷದ ಹದಿನೆಂಟು ಸಾವಿರದ ಮೂವತ್ತು ರೂಪಾಯಿಗಳು ಮಾತ್ರ) ದಿನಾಂಕ **30-09-2015** ರಂದು ಪಾವತಿಸಿರುತ್ತಾರೆ.
5. ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಆಯುಕ್ತರು, ನಗರಾಭಿವೃದ್ಧಿ ಪ್ರಾಧಿಕಾರಕ್ಕೆ ಹಸ್ತಾಂತರಿಸಿ ನೊಂದಾಯಿಸಿ ಕೊಟ್ಟಿರುವ ದಾನಪತ್ರದ ದಸ್ತಾವೇಜು ನಂ.**14486** ದಿನಾಂಕ **27-11-2015**
6. ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ/08/ಟಿಟಿಪಿ/2013 ದಿನಾಂಕ 24-5-2014
7. ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ/162/ಬೆಂರೂಪ್ರಾ/2011 ದಿನಾಂಕ 14-9-2012

* * * * *

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ ಉಲ್ಲೇಖ (1) ರ ಅರ್ಜಿದಾರರ ಕೋರಿಕೆಯಂತೆ ಉಲ್ಲೇಖ (2) ರಲ್ಲಿ ಈಗಾಗಲೇ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಸತಿ ವಿನ್ಯಾಸವನ್ನು ಮಾರ್ಪಾಡಿಸುವ ಸಂಬಂಧ ಪ್ರಸ್ತಾವನೆಯ ವಿಷಯವನ್ನು ಉಲ್ಲೇಖ (3) ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ, ತುಮಕೂರು ತಾಲ್ಲೂಕು, ಕಸಬಾ ಹೋಬಳಿ, **ತುಮಕೂರು ಅಮಾನಿಕೆರೆ** ಗ್ರಾಮದ ಸರ್ವೆ ನಂಬರ್ **295/4** ರಲ್ಲಿ **0-20** ಗುಂಟೆ ಮತ್ತು ಸ.ನಂ.**295/18** ರಲ್ಲಿ **0-18** ಗುಂಟೆ ಒಟ್ಟು **0-38 ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಮಾರ್ಪಾಡಿತ ವಿನ್ಯಾಸ ನಕ್ಷೆ ಅನುಮೋದನೆ ನೀಡಲು ತೀರ್ಮಾನಿಸಲಾಗಿರುತ್ತದೆ. ಉಲ್ಲೇಖ (4) ರಂತೆ ಅರ್ಜಿದಾರರು ಪ್ರಾಧಿಕಾರಕ್ಕೆ ವಿವಿಧ ಶುಲ್ಕಗಳನ್ನು ಪಾವತಿಸಿರುತ್ತಾರೆ ಹಾಗೂ ಉಲ್ಲೇಖ (5) ರಂತೆ ಪ್ರಸ್ತಾವಿತ ವಿನ್ಯಾಸದಲ್ಲಿನ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಪ್ರಾಧಿಕಾರಕ್ಕೆ ಪುಕ್ಕಟೆಯಾಗಿ ಪರಿತ್ಯಾಜನಾ ಪತ್ರದ ಮೂಲಕ ಹಸ್ತಾಂತರ ಮಾಡಿರುತ್ತಾರೆ. ಹಾಗಾಗಿ ಉಲ್ಲೇಖ (7) ರನ್ವಯ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17 ಹಾಗೂ ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ ಕಾಯ್ದೆ 1987 ರ ಕಲಂ 32 ರಂತೆ **ಶ್ರೀ ಹನುಮಂತರಾಯಪ್ಪ ಬಿನ್ ಲೇ॥ ಆಂಜಿನಪ್ಪ ಮತ್ತು ಶ್ರೀ ಭೀಮರಾಜು ಬಿನ್ ಲೇ॥ ಆಂಜಿನಪ್ಪ** ಎಂಬುವವರ ಪರವಾಗಿ ಈ ಕೆಳಕಂಡ ನಿಬಂಧನೆಗೊಳಪಟ್ಟು ವಸತಿ ಉದ್ದೇಶದ ಮಾರ್ಪಾಡಿತ ವಿನ್ಯಾಸ ನಕ್ಷೆಗೆ ಅನುಮೋದನೆ ನೀಡಲಾಗಿದೆ.

27/10/16

1. ಈಗ ನೀಡಿರುವ ಮಾರ್ಪಾಡು ವಿನ್ಯಾಸ ಮಂಜೂರಾತಿಯ ಅವಧಿಯು ಮಂಜೂರಾತಿ ನೀಡಿದ ದಿನದಿಂದ ಎರಡು ವರ್ಷಗಳವರೆಗೆ ಮಾತ್ರ ಜಾರಿಯಲ್ಲಿರುತ್ತದೆ.
2. ಅನುಮೋದಿತ ರೂಪರೇಖಾ ನಕ್ಷೆಯಂತೆ ವಿನ್ಯಾಸವನ್ನು ಜಮೀನಿನಲ್ಲಿ ಅಭಿವೃದ್ಧಿಪಡಿಸಿದ ನಂತರವೇ ಅಂದರೆ ರಸ್ತೆಯ ನಿರ್ಮಾಣ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಕರ್ಯ, ವಿದ್ಯುತ್ ವ್ಯವಸ್ಥೆ ಇತ್ಯಾದಿಗಳನ್ನು ನಿರ್ಮಿಸಿದ ನಂತರ ಈ ಪ್ರಾಧಿಕಾರದ ಪರೀಶೀಲನೆಗಾಗಿ ತಿಳಿಸತಕ್ಕದ್ದು.
3. ರಸ್ತೆಗಳ ನಿರ್ಮಾಣ, ಚರಂಡಿ ನಿರ್ಮಾಣ ಮತ್ತು ಡಾಂಬರೀಕರಣ ಕಾಮಗಾರಿಯನ್ನು ಪ್ರಾಧಿಕಾರದ ಕಾಮಗಾರಿ ಶಾಖೆಯಿಂದ ತಯಾರಿಸಲಾದ ಅಂದಾಜು ಪಟ್ಟಿಯಂತೆ ಅವರ ಉಸ್ತುವಾರಿಯಲ್ಲಿ ಅಭಿವೃದ್ಧಿಪಡಿಸತಕ್ಕದ್ದು. ಉದ್ಯಾನವನಕ್ಕಾಗಿ ಕಾಯ್ದಿರಿಸಿರುವ / ಮೀಸಲಿರಿಸಿರುವ ಜಾಗವನ್ನು ತೋಟಗಾರಿಕಾ ಇಲಾಖೆಯ ಸಹಕಾರ ಮತ್ತು ಮಾರ್ಗದರ್ಶನದಂತೆ ಈ ಆದೇಶ ನೀಡಿದ ಒಂದು ವರ್ಷದ ಕಾಲಾವಧಿಯಲ್ಲಿ ನಿರ್ವಹಿಸಿ ಪೂರ್ಣಗೊಳಿಸಿ, ಈ ಸಂಬಂಧ ಸಕ್ಷಮ ಪ್ರಾಧಿಕಾರದಿಂದ ದೃಢೀಕರಣ ಪತ್ರ ಪಡೆದು ಸಲ್ಲಿಸತಕ್ಕದ್ದು.
4. ವಿನ್ಯಾಸ ಪ್ರದೇಶವನ್ನು ಈ ಪ್ರಾಧಿಕಾರದ ಅನುಮೋದನೆ ನೀಡಿದ 18 ತಿಂಗಳ ಒಳಗಾಗಿ ಸಂಪೂರ್ಣವಾಗಿ (ಉದ್ಯಾನವನ, ನಾಗರೀಕ ಸೌಲಭ್ಯಕ್ಕೆ ಮೀಸಲಿಟ್ಟ ಜಾಗ, ರಸ್ತೆಗಳು, ಒಳಚರಂಡಿ ವ್ಯವಸ್ಥೆ, ನೀರಿನ ಸೌಕರ್ಯ, ವಿದ್ಯುತ್ ಸಂಪರ್ಕ) ಅಭಿವೃದ್ಧಿಪಡಿಸತಕ್ಕದ್ದು. ತಪ್ಪಿದ್ದಲ್ಲಿ ಈ ಅನುಮೋದನೆಯನ್ನು ಯಾವ ಸೂಚನೆಯನ್ನು ನೀಡದೇ ರದ್ದುಪಡಿಸಲಾಗುವುದು.
5. ಅನುಮೋದಿತ ವಿನ್ಯಾಸದಲ್ಲಿ ಈ ಪ್ರಾಧಿಕಾರವು ಪೂರ್ವಾನುಮತಿ ಇಲ್ಲದೇ ಯಾವುದೇ ಬದಲಾವಣೆಯನ್ನು ಮಾಡಬಾರದು.
6. ವಿನ್ಯಾಸವನ್ನು ಕಾರ್ಯಾಗತಗೊಳಿಸುವ ಮೊದಲು ಸಂಬಂಧಪಟ್ಟ ಗ್ರಾಮ ಪಂಚಾಯ್ತಿ / ಮಹಾನಗರಪಾಲಿಕೆ ಕಾಯ್ದೆಯಂತೆ ಅನುಮತಿಯನ್ನು ಪಡೆಯತಕ್ಕದ್ದು.
7. ಪ್ರಸ್ತಾವಿತ ವಿನ್ಯಾಸದಲ್ಲಿ ಸೂಕ್ತವಾದ ಕಡೆ ಪ್ರಮಾಣೀಕೃತ ರೀತಿಯಲ್ಲಿ ಸೀವೇಜ್ ಟ್ರೇಟ್‌ಮೆಂಟ್ ಪ್ಲಾಂಟ್ ಅನ್ನು ಸ್ಥಾಪಿಸಬೇಕು ಮತ್ತು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ದಿನಾಂಕ 21-11-2005 ರ ಪತ್ರ ಸಂಖ್ಯೆ 217/KSPCB/RO-BNG(S-II)CFE/2005-2006/5361 ಷರತ್ತುಗಳನ್ನು ತಪ್ಪದೇ ಅನುಸರಿಸತಕ್ಕದ್ದು.
8. ಈ ಪ್ರಾಧಿಕಾರದ ಪೂರ್ವಾನುಮತಿಯಿಲ್ಲದೆ ವಿನ್ಯಾಸದಲ್ಲಿನ ನಿವೇಶನಗಳು ಸಂಖ್ಯೆ ಮತ್ತು ಅಳತೆಗಳಲ್ಲಿ ಯಾವುದೇ ಬದಲಾವಣೆಯನ್ನು ಮಾಡಬಾರದು. ಈ ಪ್ರದೇಶದಲ್ಲಿ ಹಾಲಿ ಇರುವ ಗಿಡಮರಗಳನ್ನು ಸಾಧ್ಯವಾದಷ್ಟು ಮಟ್ಟಿಗೆ ಉಳಿಸಿಕೊಳ್ಳತಕ್ಕದ್ದು ಮತ್ತು ರಸ್ತೆಗಳ ಎರಡೂ ಕಡೆ ಹೊಸ ಸಸ್ಯಗಳನ್ನು ಬೆಳೆಸುವುದು.
9. ಅನುಮೋದಿತ ವಿನ್ಯಾಸದಲ್ಲಿನ ಕಟ್ಟಡಗಳಲ್ಲಿ ಮಳೆ ನೀರು ಸಂಗ್ರಹಣೆಯನ್ನು ಕಡ್ಡಾಯವಾಗಿ ಅಳವಡಿಸುವುದು ಮತ್ತು ವಿನ್ಯಾಸದಲ್ಲಿ ಅಂತರ್‌ಜಲ ವೃದ್ಧಿಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳುವುದು.
10. ಅನುಮೋದಿತ ವಿನ್ಯಾಸದಲ್ಲಿರುವ ರಸ್ತೆ ಮತ್ತು ಉದ್ಯಾನವನ ಪ್ರದೇಶವನ್ನು ಸಂಪೂರ್ಣವಾಗಿ ಅಭಿವೃದ್ಧಿಪಡಿಸಿ ಈ ಪ್ರಾಧಿಕಾರದಿಂದ ತಿಳಿಸುವವರೆಗೆ ನಿರ್ವಹಣೆಯನ್ನು ಮಾಡತಕ್ಕದ್ದು
11. ಮೇಲ್ಕಂಡ ಯಾವುದೇ ಷರತ್ತುಗಳನ್ನು ಹಾಗೂ ಈ ಕೆಳಗಿನ ಮತ್ತು ಇತರೆ ಯಾವುದೇ ಪ್ರಾಧಿಕಾರವು ವಿಧಿಸುವ ಷರತ್ತುಗಳನ್ನು ಉಲ್ಲಂಘಿಸಿದಲ್ಲಿ ಪ್ರಾಧಿಕಾರವು ನೀಡಿರುವ ವಿನ್ಯಾಸ ಮಂಜೂರಾತಿಯ ಆದೇಶ ಕೂಡಲೇ ರದ್ದಾಗುವುದು. ಮಾರಾಟಕ್ಕೆ ಬಿಡುಗಡೆ ಮಾಡಲಾದ ಈ ಅನುಮತಿ ಯಾವುದೇ ಪೂರ್ವ ಮಾಹಿತಿ ನೀಡದೇ ರದ್ದುಪಡಿಸುವ ಹಾಗೂ ಕಾನೂನು ಕ್ರಮ ಜರುಗಿಸುವ ಹಕ್ಕನ್ನು ಪ್ರಾಧಿಕಾರಕ್ಕೆ ದತ್ತವಾಗಿರುತ್ತದೆ.
12. ವಿನ್ಯಾಸದಲ್ಲಿನ ರಸ್ತೆಗಳಿಂದ ಅಕ್ಕಪಕ್ಕದ ಜಮೀನುಗಳಿಗೆ ಇರುವ ಸಂಪರ್ಕ ಯಾವುದೇ ಕಾರಣಕ್ಕೂ ನಿರ್ಬಂಧಿಸತಕ್ಕದ್ದಲ್ಲ.
13. ಈ ಅನುಮೋದನೆಯು ತಾಂತ್ರಿಕವಾಗಿರುವುದರಿಂದ, ಇದನ್ನು ಜಮೀನಿನ ಮೇಲಿರುವ ಹಕ್ಕನ್ನು ಅಥವಾ ಮಾಲೀಕತ್ವವನ್ನು ನಿರೂಪಿಸಲು ಮತ್ತು ಉಪಯೋಗಿಸಲು ಬರುವುದಿಲ್ಲ.
14. ಜಮೀನಿಗೆ ಸಂಬಂಧಿಸಿದಂತೆ ಯಾವುದೇ ಸಿವಿಲ್ ವ್ಯಾಜ್ಯಗಳಿಗೆ ಪ್ರಾಧಿಕಾರವು ಜವಾಬ್ದಾರಿಯಾಗುವುದಿಲ್ಲ.
15. ವಿನ್ಯಾಸ ಅಂಗೀಕಾರ ಕೋರಿಕೆ ಸಂಬಂಧ ಸಲ್ಲಿಸಲಾಗಿರುವ ದಾಖಲೆ ಅಥವಾ ಬೇರೆ ಯಾವುದೇ ಮಾಹಿತಿಗಳು ತಪ್ಪಾಗಿದ್ದಲ್ಲಿ ವಿನ್ಯಾಸಕ್ಕೆ ನೀಡಿರುವ ಅಂಗೀಕಾರ ತಾನೆ ರದ್ದುಗೊಳ್ಳುತ್ತದೆ ಮತ್ತು ಸಂಬಂಧಿಸಿದವರ ವಿರುದ್ಧ ಕಾನೂನು ಕ್ರಮಕೈಗೊಳ್ಳಲಾಗುವುದು.
16. ಈ ವಿನ್ಯಾಸದಲ್ಲಿ ಬರುವ ನಿವೇಶನಗಳ ಮಾರಾಟ ಸಂಬಂಧ ನೀಡುವ ಪ್ರಚಾರದಲ್ಲಿ ಪ್ರಾಧಿಕಾರದಿಂದ ಅನುಮೋದನೆ ಆಗಿರುವ ಅನುಮೋದನೆ ಸಂಖ್ಯೆ ಮತ್ತು ದಿನಾಂಕವನ್ನು ಕಡ್ಡಾಯವಾಗಿ ನಮೂದಿಸತಕ್ಕದ್ದು.

27/10/16

17. ರಸ್ತೆ ಬದಿಯಲ್ಲಿ ಪಾದಚಾರಿಗಳು ಓಡಾಡಲು ಅನುಕೂಲವಾಗುವಂತೆ ಸೂಕ್ತವಾಗಿ ಪಾದಚಾರಿ ಮಾರ್ಗವನ್ನು (Paved Foot Path) ನಿರ್ಮಿಸುವುದು.
18. ಅನುಮೋದಿತ ವಿನ್ಯಾಸದಲ್ಲಿನ ಮೊದಲನೇ ಹಂತದ ಶೇಕಡ 40 ರಷ್ಟು ನಿವೇಶನಗಳನ್ನು ಸರ್ಕಾರದ ಸುತ್ತೋಲೆ ಸಂಖ್ಯೆ ನಅಇ/08/ಟಿಟಿಪಿ/2013 ದಿನಾಂಕ 24-05-2014 ರಲ್ಲಿನ ಮಾರ್ಗಸೂಚಿಯಂತೆ ಬಿಡುಗಡೆಗೊಳಿಸಲಾಗುವುದು ಹಾಗೂ ಸುತ್ತೋಲೆಯಲ್ಲಿ ತಿಳಿಸಿರುವಂತೆ ಎರಡನೇ ಮತ್ತು ಮೂರನೇ ಹಂತದ ನಿವೇಶನಗಳ ಬಿಡುಗಡೆಗೆ ಮನವಿಯೊಂದಿಗೆ ಸಂಬಂಧಪಟ್ಟ ಸ್ಥಳೀಯ ಸಂಸ್ಥೆಯಿಂದ ದೃಢೀಕರಣ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.
19. ಹಾಲಿ ಒಳಚರಂಡಿ ವ್ಯವಸ್ಥೆ ಇದ್ದರೆ ಅದಕ್ಕೆ ಸಂಪರ್ಕ ಕಲ್ಪಿಸುವುದು. ಇಲ್ಲದಿದ್ದ ಪಕ್ಷದಲ್ಲಿ ಒಳಚರಂಡಿ ವ್ಯವಸ್ಥೆಯ ಸೆಪ್ಟಿಕ್ ಟ್ಯಾಂಕ್‌ಗೆ ಪ್ರತ್ಯೇಕ ಜಾಗವನ್ನು ಕಾಯ್ದಿರಿಸುವುದು.
22. ವಿನ್ಯಾಸದಲ್ಲಿ ಸಿಮೆಂಟ್ ಕಾಂಕ್ರೀಟ್ ಚರಂಡಿಗಳನ್ನು ನಿರ್ಮಿಸುವುದು.
23. ವಿನ್ಯಾಸವನ್ನು ಸಂಪೂರ್ಣ ಅಭಿವೃದ್ಧಿ ಪಡಿಸಿದ ನಂತರ ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ ಹಾಗೂ ಬೆಂಗಳೂರು ವಿದ್ಯುತ್‌ಚ್ಛಕ್ತಿ ಮಂಡಳಿ ಇವರಿಂದ ನಿರಾಕ್ಷೇಪಣಾ ಪತ್ರವನ್ನು ಪಡೆದು ಸಲ್ಲಿಸತಕ್ಕದ್ದು.
24. ಬಡಾವಣೆಯಲ್ಲಿನ ಉದ್ಯಾನವನಕ್ಕೆ ಕಲ್ಲಿನ ಬೇಸ್‌ಮೆಂಟ್, ಚೈನ್‌ಲಿಂಕ್ ಫೆನ್ಸಿಂಗ್ ಅಳವಡಿಸಿ ಸಸಿಗಳನ್ನು ನೆಡತಕ್ಕದ್ದು ಮತ್ತು ಉದ್ಯಾನವನಕ್ಕೆ ನಾಮಫಲಕ ಹಾಕಿಸತಕ್ಕದ್ದು.

ಮೇಲಿನಂತೆ ನೀಡಲಾಗಿರುವ ಅನುಮತಿಗೆ ವ್ಯತಿರಿಕ್ತವಾಗಿ ಅಭಿವೃದ್ಧಿ ಕಾಮಗಾರಿಯನ್ನು ಕೈಗೊಂಡಲ್ಲಿ ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಕಲಂ 17(4) ರಂತೆ ಕ್ರಮಕೈಗೊಳ್ಳಲು ಪ್ರಾಧಿಕಾರಕ್ಕೆ ಅವಕಾಶವಿರುವುದನ್ನು ತಮ್ಮ ಗಮನಕ್ಕೆ ತರಲಾಗಿದೆ.

ಆಯುಕ್ತರು
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು

ಗೆ,
ಶ್ರೀ ಹನುಮಂತರಾಯಪ್ಪ ಬಿನ್ ಲೇ॥ ಆಂಜಿನಪ್ಪ
ಶ್ರೀ ಭೀಮರಾಜು ಬಿನ್ ಲೇ॥ ಆಂಜಿನಪ್ಪ
ಶಿರಾಗೇಟ್,
ಕಸಬಾ ಹೋಬಳಿ,
ತುಮಕೂರು ತಾಲ್ಲೂಕು

ಪ್ರತಿಯನ್ನು :-
1. ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ರವಾನಿಸಿದೆ.
2. ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು, ತುಮಕೂರು ಇವರಿಗೆ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
3. ಸಹಾಯಕ ಕಾರ್ಯಪಾಲಕ ಅಭಿಯಂತರರು, ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ, ತುಮಕೂರು ರವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
4. ಸಹಾಯಕ ಕಾರ್ಯಪಾಲಕ ಅಭಿಯಂತರರು, ಬೆಸ್ಕಾಂ, ತುಮಕೂರು ಇವರಿಗೆ ಮಾಹಿತಿಗಾಗಿ ಹಾಗೂ ಮುಂದಿನ ಕ್ರಮಕ್ಕಾಗಿ ಕಳುಹಿಸಲಾಗಿದೆ.
5. ಕಛೇರಿ ಪ್ರತಿ.

ಫ್ಯಾಕ್ಸ್ : 0816-2255761
ದೂರವಾಣಿ : 2272280

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103

ನಂ.ಟಿಯುಡಿಎ/ಎಲ್ಎಒ/**91**/2015–16 ದಿನಾಂಕ : 16-12-15

ಉಪನೊಂದಣಾಧಿಕಾರಿಗಳು
ತುಮಕೂರು ತಾಲ್ಲೂಕು,
ತುಮಕೂರು

ಮಾನ್ಯರೇ,

ಪ್ರಮಾಣ ಪತ್ರ – 1

ವಿಷಯ : ತುಮಕೂರು ತಾಲ್ಲೂಕು, ಕಸಬಾ ಹೋಬಳಿ, **ತುಮಕೂರು ಅಮಾನಿಕೆರೆ** ಗ್ರಾಮದ ಸರ್ವೆ ನಂಬರ್ **295/4** ರಲ್ಲಿ **0–20** ಗುಂಟೆ ಮತ್ತು ಸ.ನಂ.**295/18** ರಲ್ಲಿ **0–18** ಗುಂಟೆ ಒಟ್ಟು **0–38 ಗುಂಟೆ** ವಿಸ್ತೀರ್ಣದ ಪ್ರದೇಶದ ಅನುಮೋದಿತ ವಿನ್ಯಾಸದಲ್ಲಿನ 1ನೇ ಹಂತದ ಶೇಕಡ **40** ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1. ಅರ್ಜಿದಾರರ ಮನವಿ ದಿನಾಂಕ **10–12–2015**
2. ಸರ್ಕಾರದ ಸುತ್ತೋಲೆಯ ಸಂಖ್ಯೆ ನಅಇ/08/ಟಿಟಿಪಿ/13 ದಿನಾಂಕ 24–05–2014
3. ಈ ಕಛೇರಿಯ ವಿನ್ಯಾಸ ಮಂಜೂರಾತಿ ಆದೇಶ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/**91**/2015–16 ದಿನಾಂಕ **10–12–2015**.

* * * * *

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಅರ್ಜಿದಾರರ ಮನವಿಯಲ್ಲಿ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಬಡಾವಣೆಯಲ್ಲಿನ ಶೇಕಡ 40 ರಷ್ಟು ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆಗೊಳಿಸುವಂತೆ ಕೋರಿರುತ್ತಾರೆ. ಅದರಂತೆ ಪರೀಶೀಲಿಸಲಾಗಿ, ಪ್ರಾಧಿಕಾರದಿಂದ ಅನುಮೋದನೆಯಾಗಿರುವ ವಿನ್ಯಾಸದಲ್ಲಿ ಒಟ್ಟು **21** ನಿವೇಶನಗಳಿರುತ್ತವೆ. ಈ ಪೈಕಿ ಉಲ್ಲೇಖ (2) ರ ಸರ್ಕಾರದ ಸುತ್ತೋಲೆಯಂತೆ ಈ ಕೆಳಕಂಡ ಶೇಕಡ 40 ರಷ್ಟು (**08 ನಿವೇಶನಗಳು**) ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗಿದೆ. ಉಳಿದಂತೆ ಬಾಕಿ ಇರುವ ಶೇಕಡ 60 ರಷ್ಟು (**13 ನಿವೇಶನಗಳು**) ನಿವೇಶನಗಳನ್ನು ಸರ್ಕಾರದ ಸುತ್ತೋಲೆಯ ಮಾರ್ಗದರ್ಶನದಂತೆ ಅಭಿವೃದ್ಧಿ ಕಾಮಗಾರಿಗಳನ್ನು ಪೂರ್ಣಗೊಳಿಸಿದ ನಂತರ ಎರಡು ಹಂತಗಳಲ್ಲಿ ಬಿಡುಗಡೆಗೊಳಿಸಲಾಗುವುದು. ತಪ್ಪಿದಲ್ಲಿ ಬಾಕಿ ಇರುವ ಶೇಕಡ 60 ರಷ್ಟು (**13 ನಿವೇಶನಗಳು**) ನಿವೇಶನಗಳನ್ನು ಪ್ರಾಧಿಕಾರಕ್ಕೆ ಮುಟ್ಟುಗೋಲು ಹಾಕಿಕೊಂಡು ಪ್ರಾಧಿಕಾರದಿಂದಲೇ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುವುದು. ಆದ್ದರಿಂದ ಈ ಕೆಳಕಂಡ ನಿವೇಶನಗಳನ್ನು ಮಾತ್ರ ನೊಂದಣಿ ಮಾಡಬೇಕೆಂದು ಈ ಮೂಲಕ ತಿಳಿಸಲಾಗಿದೆ. ಈ ಪತ್ರದೊಂದಿಗೆ ಆದೇಶದ ಪ್ರತಿ ಮತ್ತು ನಕ್ಷೆಯನ್ನು ಲಗತ್ತಿಸಿದೆ.

1. 1ನೇ ಹಂತದ ಶೇಕಡ 40 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.

ಕ್ರ.ಸಂ.	ವಿಸ್ತೀರ್ಣ	ನಿವೇಶನಗಳ ಸಂಖ್ಯೆ	ಒಟ್ಟು
1.	09.14X12.19	09, 10, 17, 19, 20	**05**
2.	09.14XODD	05	**01**
3.	ODD Sites	07, 08	**02**
		ಒಟ್ಟು	**08**

ಆಯುಕ್ತರು 15/12/15
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು

ಪ್ರತಿಯನ್ನು :–
1. ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ರವಾನಿಸಿದೆ.
2. ಶ್ರೀ ಹನುಮಂತರಾಯಪ್ಪ ಬಿನ್ ಲೇ॥ ಆಂಜಿನಪ್ಪ, ಶ್ರೀ ಭೀಮರಾಜು ಬಿನ್ ಲೇ॥ ಆಂಜಿನಪ್ಪ, ಶಿರಾಗೇಟ್, ಕಸಬಾ ಹೋಬಳಿ, ತುಮಕೂರು ತಾಲ್ಲೂಕು ಇವರಿಗೆ ಮಾಹಿತಿಗಾಗಿ ಕಳುಹಿಸಿದೆ.
3. ಕಛೇರಿ ಪ್ರತಿ.

ಫ್ಯಾಕ್ಸ್ : 0816-2255761
ದೂರವಾಣಿ : 2272280

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು – 572 103

ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ
ಬೆಳಗುಂಬ ರಸ್ತೆ, ತುಮಕೂರು

ನಂ.ಟಿಯುಡಿಎ/ಎಲ್.ಎಓ/91/2015-16

ದಿನಾಂಕ : 28-10-16

ಆದೇಶ ಪತ್ರ

ವಿಷಯ : ತುಮಕೂರು ತಾಲ್ಲೂಕು, ಕಸಬಾ ಹೋಬಳಿ, **ತುಮಕೂರು ಅಮಾನಿಕೆರೆ** ಗ್ರಾಮದ ಸರ್ವೆ ನಂಬರ್ **295/4** ರಲ್ಲಿ **0-20** ಗುಂಟೆ ಮತ್ತು ಸ.ನಂ.**295/18** ರಲ್ಲಿ **0-18** ಗುಂಟೆ ಒಟ್ಟು **0-38 ಗುಂಟೆ** ವಿಸ್ತೀರ್ಣದ ಪ್ರದೇಶಕ್ಕೆ ಮಾರ್ಪಾಡು ಅನುಮೋದನೆಯಾಗಿರುವ ವಿನ್ಯಾಸದಲ್ಲಿನ ಬಾಕಿ 2ನೇ ಮತ್ತು 3ನೇ ಹಂತದ ಶೇಕಡ 30+30=60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡುವ ಬಗ್ಗೆ.

ಉಲ್ಲೇಖ : 1. ಅರ್ಜಿದಾರರ ಮನವಿ ದಿನಾಂಕ **23-07-2016**
2. ಈ ಕಛೇರಿಯ ಮಾರ್ಪಾಡಿತ ವಿನ್ಯಾಸ ಮಂಜೂರಾತಿ ಆದೇಶ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/**91**/2015-16 ದಿನಾಂಕ **28-10-2016.**
3. ದಿನಾಂಕ **23-08-2016** ರಂದು ನಡೆದ ಪ್ರಾಧಿಕಾರದ ಸಭೆಯ ವಿಷಯ ಸಂಖ್ಯೆ **23** ರ ನಿರ್ಣಯ
4. ಸರ್ಕಾರದ ಸುತ್ತೋಲೆಯ ಸಂಖ್ಯೆ ನಲೀಇ/08/ಟಿಟಿಪ್ರಿ/2013 ದಿನಾಂಕ 24-05-2014
5. ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ರವರ ಪತ್ರ ಸಂಖ್ಯೆ ತುಮಪಾ/ಕಂಶಾ/ಸಿಆರ್/47/2016-17 ದಿನಾಂಕ **23-09-2016**

* * * * *

ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಅರ್ಜಿದಾರರ ಮನವಿಯಲ್ಲಿ ಉಲ್ಲೇಖ (2) ರ ಪ್ರಾಧಿಕಾರದಿಂದ ಅನುಮೋದನೆಯಾಗಿರುವ ಬಡಾವಣೆಯಲ್ಲಿನ ಎಲ್ಲಾ ಕಾಮಗಾರಿಗಳನ್ನು ಪೂರ್ಣಗೊಳಿಸಿದ್ದು, ವಿನ್ಯಾಸದಲ್ಲಿ ಬಾಕಿ ಇರುವ ಶೇಕಡ 30 ರಷ್ಟು ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಿಕೊಡಬೇಕೆಂದು ಕೋರಿರುತ್ತಾರೆ. ಅದರಂತೆ ಪರಿಶೀಲಿಸಿ ಸದರಿ ಪ್ರಸ್ತಾವನೆಯ ವಿಷಯವನ್ನು ಉಲ್ಲೇಖ (3) ರ ಪ್ರಾಧಿಕಾರದ ಸಭೆಯಲ್ಲಿ ಮಂಡಿಸಿ ಸಭೆಯ ತೀರ್ಮಾನದಂತೆ ಹಾಗೂ ಉಲ್ಲೇಖ (4) ರ ಸರ್ಕಾರದ ಸುತ್ತೋಲೆಯಂತೆ ಉಲ್ಲೇಖ (5) ರ ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ರವರ ಪತ್ರದಲ್ಲಿ ಸದರಿ ವಿನ್ಯಾಸದಲ್ಲಿನ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡಿರುವ ಬಗ್ಗೆ ದೃಢೀಕರಣ ಪತ್ರವನ್ನು ನೀಡಿರುತ್ತಾರೆ.

ಹಾಗಾಗಿ ಪ್ರಸ್ತಾವಿತ ತುಮಕೂರು ತಾಲ್ಲೂಕು, **ತುಮಕೂರು ಅಮಾನಿಕೆರೆ** ಗ್ರಾಮದ ಸರ್ವೆ ನಂಬರ್ **295/4** ರಲ್ಲಿ **0-20** ಗುಂಟೆ ಮತ್ತು ಸ.ನಂ.**295/18** ರಲ್ಲಿ **0-18** ಗುಂಟೆ ಒಟ್ಟು **0-38 ಗುಂಟೆ** ಪ್ರದೇಶಕ್ಕೆ ಅನುಮೋದನೆಯಾಗಿರುವ ವಿನ್ಯಾಸದಲ್ಲಿನ ಬಾಕಿ ಇರುವ 2ನೇ ಮತ್ತು 3ನೇ ಹಂತದ ಶೇಕಡ 30+30=60 ರಷ್ಟು ನಿವೇಶನಗಳನ್ನು ನೊಂದಣಿಗಾಗಿ ಬಿಡುಗಡೆ ಮಾಡಲಾಗಿದೆ. ಉಳಿದಂತೆ ಉಲ್ಲೇಖ (2) ರ ಪತ್ರದಲ್ಲಿನ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.


1. **ಬಾಕಿ ಉಳಿದಿರುವ 2ನೇ ಮತ್ತು 3ನೇ ಹಂತದ ಶೇಕಡ 30+30=60 ರಷ್ಟು ನಿವೇಶನಗಳನ್ನು ಬಿಡುಗಡೆ ಮಾಡಲಾಗಿದೆ.**


ಕ್ರ.ಸಂ.	ವಿಸ್ತೀರ್ಣ	ನಿವೇಶನಗಳ ಸಂಖ್ಯೆ	ಒಟ್ಟು
1.	09.14X12.19	16, 18	**02**
2.	09.14X12.50	11, 12, 13	**03**
3.	09.14XODD	02, 03, 04, 06	**04**
4.	ODD	01, 14, 15, 21	**04**
		ಒಟ್ಟು	**13**

ಆಯುಕ್ತರು 28/10/16
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

ಪ್ರತಿಯನ್ನು :-

1. ಆಯುಕ್ತರು, ಮಹಾನಗರಪಾಲಿಕೆ, ತುಮಕೂರು ಇವರಿಗೆ ಮಾಹಿತಿಗಾಗಿ ಹಾಗೂ ಸದರಿ ಬಡಾವಣೆಯ ಮುಂದಿನ ನಿರ್ವಹಣೆಗಾಗಿ ರವಾನಿಸಿದೆ.
2. ಉಪನೊಂದಣಾಧಿಕಾರಿಗಳು, ತುಮಕೂರು ತಾಲ್ಲೂಕು ಇವರಿಗೆ ಮಾಹಿತಿಗಾಗಿ ಮತ್ತು ಮುಂದಿನ ಕ್ರಮಕ್ಕಾಗಿ ರವಾನಿಸಿದೆ.
3. ಶ್ರೀ ಹನುಮಂತರಾಯಪ್ಪ ಬಿನ್ ಲೇ॥ ಆಂಜಿನಪ್ಪ, ಶ್ರೀ ಭೀಮರಾಜು ಬಿನ್ ಲೇ॥ ಆಂಜಿನಪ್ಪ, ಶಿರಾಗೇಟ್, ಕಸಬಾ ಹೋಬಳಿ, ತುಮಕೂರು ತಾಲ್ಲೂಕು ಇವರಿಗೆ ಕಳುಹಿಸಿದೆ
4. ಕಛೇರಿ ಪ್ರತಿ.





KEY PLAN NOT TO SCALE

LAND USE ANALYSIS

USE	AREA IN SQ M	%
RESIDENTIAL	2114.10	54.99
PARK	637.40	16.58
ROAD	1092.96	28.43
TOTAL	3844.46	100.00

B. Somashekaraiah D.C.E.,
Consulting Civil Engineer
TUMKUR
Reg. No. : TUDA/EST/CR/82/2002-03

SCALE 1:600

N

INDEX

SITE SIZE	FIRST STAGE 40% OF RELEASED SITES	SECOND STAGE 30% OF NOT RELEASED SITES	THIRD STAGE 30% OF NOT RELEASED SITES	NO OF SITES
9.14X12.19	17,19,20	18	16	05
9.14X12.50	9,10	11	12,13	05
9.14XODD	5	2,6	3,4	05
ODD	7,8	1,14	15,21	06
NO OF SITES	08	06	07	21

OWNERS NAME : BHIMARAJU & HANUMATHARAYAPPA

GOVERNMENT OF KARNATAKA
TUMKUR URBAN DEVELOPMENT AUTHORITY
TUMKUR

TOWN PLANNING MEMBER
T U D A
TUMKUR

COMMISSIONER
T U D A
TUMKUR

27/10/16

DRN BY | CKD BY | DRG NO

TITTLE

MODIFIED RESIDENTIAL LAY OUT PLAN IN SY NO-295/5 EXTANT 0A-18G & SY NO-295/4 EXTENT 0A-20G TOTAL EXTANT 0A-38G AT TUMKUR AMANIKERE, KASABA(H), TUMKUR.

EXTENT :0Acre-38 Guntas

ಫ್ಯಾಕ್ಸ್ : 0816-2255761
ದೂರವಾಣಿ : 2272280

ತುಮಕೂರು ನಗರಾಭಿವೃದ್ಧಿ ಪ್ರಾಧಿಕಾರ

ಬೆಳಗುಂಬ ರಸ್ತೆ, ತುಮಕೂರು - 572 103

ನಗರಾಭಿವೃದ್ಧಿ ಪ್ರಾಧಿಕಾರ ಕಛೇರಿ
ದಿನಾಂಕ : 5.11.16

ನಂ.ಟಿಯುಡಿಎ/ನಯೋ/ವಿನ್ಯಾಸ/91/2015–16

ತಿದ್ದುಪಡಿ ಆದೇಶ

ವಿಷಯ : ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ತುಮಕೂರು ಅಮಾನಿಕೆರೆ ಗ್ರಾಮದ ಸರ್ವೆ ನಂಬರ್ 295/4 ರಲ್ಲಿ 0–20 ಗುಂಟೆ, ಸ.ನಂ.295/18 ರಲ್ಲಿ 0–18 ಗುಂಟೆ ಒಟ್ಟು 0–38 ಗುಂಟೆ ವಿಸ್ತೀರ್ಣದ ಪ್ರದೇಶಕ್ಕೆ ವಾಸದ ಉಪಯೋಗಕ್ಕೆ ಅಂತಿಮ ಆದೇಶ ಪತ್ರ ನೀಡಿರುವ ಬಗ್ಗೆ.

ಉಲ್ಲೇಖ :
1. ಅರ್ಜಿದಾರರ ಮನವಿ ದಿನಾಂಕ 03–10–2016
2. ಈ ಕಛೇರಿಯ ಪ್ರಮಾಣ ಪತ್ರ (1) ರ ಪತ್ರ ಸಂಖ್ಯೆ ಟಿಯುಡಿಎ/ಎಲ್ಎಓ/91/2015–16 ದಿನಾಂಕ 16–12–2015
3. ಈ ಕಛೇರಿಯ ಮಾರ್ಪಾಡಿತ ವಿನ್ಯಾಸ ಮಂಜೂರಾತಿ ಆದೇಶ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/91/2015–16 ದಿನಾಂಕ 28–10–2016
4. ಈ ಕಛೇರಿಯ ಅಂತಿಮ ಅದೇಶ ಪತ್ರ ಸಂಖ್ಯೆ ತುನಪ್ರಾ/ನಯೋ/ವಿನ್ಯಾಸ/91/2015–16 ದಿನಾಂಕ 28–10–2016

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖ (1) ರ ಮನವಿಯಲ್ಲಿ ತುಮಕೂರು ತಾಲ್ಲೂಕು, ಕಸಬಾ ಹೋಬಳಿ, ತುಮಕೂರು ಅಮಾನಿಕೆರೆ ಗ್ರಾಮದ ಸರ್ವೆ ನಂಬರ್ 295/4 ರಲ್ಲಿ 0–20 ಗುಂಟೆ, ಸ.ನಂ.295/18 ರಲ್ಲಿ 0–18 ಗುಂಟೆ ಒಟ್ಟು 0–38 ಗುಂಟೆ ವಿಸ್ತೀರ್ಣದ ಮಾರ್ಪಾಡಿತ ವಿನ್ಯಾಸ ಮಂಜೂರಾತಿ ವಿನ್ಯಾಸದ ಆದೇಶ ಮತ್ತು ಅಂತಿಮ ಹಂತದ ಆದೇಶ ಪತ್ರದಲ್ಲಿ ಬಿಡುಗಡೆಗೆ ನೀಡಲಾಗಿರುವ ಆದೇಶದಲ್ಲಿ ಸ.ನಂ.295/5 ಬದಲಾಗಿ ಸ.ನಂ.295/18 ಎಂದು ತಪ್ಪಾಗಿ ನಮೂದಾಗಿರುತ್ತದೆ. ಹಾಗಾಗಿ, ಸದರಿ ಸರ್ವೆ ನಂಬರ್‌ನ್ನು ತಿದ್ದುಪಡಿ ಮಾಡಿಕೊಡಬೇಕೆಂದು ಕೋರಿರುತ್ತಾರೆ.

ಆದರಂತೆ ಪರಿಶೀಲಿಸಲಾಗಿ, ಮಾರ್ಪಾಡು ವಿನ್ಯಾಸ ಅನುಮೋದನೆ ಆದೇಶ ಮತ್ತು ಅಂತಿಮ ಆದೇಶ ಪತ್ರದಲ್ಲಿ ನಿವೇಶನಗಳ ಬಿಡುಗಡೆಗೆ ನೀಡಲಾಗಿರುವ ಪತ್ರದಲ್ಲಿ ಸರ್ವೆ ನಂಬರ್ **295/5** ಎಂಬುದಾಗಿ ಓದಿಕೊಳ್ಳುವುದು ಎಂದು ಈ ಮೂಲಕ ತಿಳಿಯಪಡಿಸಿದೆ. ಉಳಿದಂತೆ ಈ ಹಿಂದಿನ ಉಲ್ಲೇಖ (3) ರ ಆದೇಶದಲ್ಲಿನ ಎಲ್ಲಾ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು.

ಆಯುಕ್ತರು 5/11/16
ನಗರಾಭಿವೃದ್ಧಿ ಪ್ರಾಧಿಕಾರ,
ತುಮಕೂರು.

ಗೆ,

1. ಶ್ರೀ ಹನುಮಂತರಾಯಪ್ಪ ಬಿನ್ ಲೇ॥ ಆಂಜಿನಪ್ಪ, ಶ್ರೀ ಭೀಮರಾಜು ಬಿನ್ ಲೇ॥ ಆಂಜಿನಪ್ಪ, ಶಿರಾಗೇಟ್, ಕಸಬಾ ಹೋಬಳಿ, ತುಮಕೂರು ತಾಲ್ಲೂಕು ಇವರಿಗೆ ಕಳುಹಿಸಿದೆ.
2. ಕಛೇರಿ ಪ್ರತಿ